ಸಾಕ್ಷಿಯನ್ನು ದಿ: **26.11.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

| | | |
|---|---|---|
| **ಹೆಸರು** | **ಸಣ್ಣ ಮಾದಯ್ಯ** | **ಪಿ. ಡಬ್ಲ್ಯೂ:4** |
| **ತಂದೆಯ ಹೆಸರು** | **ಕೆಲ್ಲಯ್ಯ** | |
| **ವಯಸ್ಸು** | **63 ವರ್ಷ** | |
| **ಉದ್ಯೋಗ** | **ದಸ್ತಾವೇಜು ಬರಹಗಾರ.** | |

ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಇ ಬಿ ಆರ್ ವಕೀಲರಿಂದ:-

ನಾನು 2010-11 ನೇ ಸಾಲಿನಿಂದ ಹುಣಸೂರು ತಾಲ್ಲೂಕಿನಲ್ಲಿ ಡಿಡ್ ರೈಟರ್ ಆಗಿದ್ದೇನೆ. ಈ ದಾವೆಗೆ ಸಂಬಂಧಪಟ್ಟಂತೆ ಕ್ರಯದ ಕರಾರನ್ನು ನಾನೇ ಬರೆದಿದ್ದೇನೆ. ಸದರಿ ಕರಾರನ್ನು ಜನವರಿ 2019 ರಲ್ಲಿ ತಯಾರಿಸಿದ್ದೇನೆ. ಸದರಿ ದಾಖಲೆಯನ್ನು ತಯಾರಿಸುವಾಗ 1ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಹಾಗೂ ವಾದಿ ಬಂದಿದ್ದರು. ಸದರಿ ಕ್ರಯದ ಕರಾರಿನ ಒಟ್ಟು ಪ್ರತಿಫಲ ರೂ.24,00,000/- ರೂ. 5 ಲಕ್ಷ ಮುಂಗಡ ಹಣ ಕೊಟ್ಟಿದ್ದಾರೆ. ಆ ಪೈಕಿ ರೂ.2 ವರೆ ಲಕ್ಷ ಆರ್.ಟಿ.ಜಿ ಎಸ್ ಮೂಲಕ ಹಾಗೂ ರೂ.2 ವರೆ ಲಕ್ಷವನ್ನು ನಗದಾಗಿ ಕೊಟ್ಟಿದ್ದಾರೆ. ಸದರಿ ಪತ್ರವನ್ನು ದೊಡ್ಡ ಹುಣಸೂರು ಗ್ರಾಮದ ಸರ್ವೆ ನಂ.374 ರಲ್ಲಿ 2 ಎಕರೆಯ ಬಗ್ಗೆ ಬರೆಯಲಾಗಿದೆ. ಸದರಿ ದಾಖಲೆಗೆ ರಾಮು ಮತ್ತು ಕಾಂತರಾಜು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ. ಸದರಿ ಪತ್ರವನ್ನು ತಯಾರಿಸಲು ವಾದಿ ಪ್ರತಿವಾದಿಯರು ಮಾಹಿತಿ ನೀಡಿದ್ದಾರೆ. ಸದರಿ ದಾಖಲೆಗೆ ವಾದಿ , 1ನೇ ಪ್ರತಿವಾದಿ ಹಾಗೂ ಅವರ ಕುಟುಂಬದ ಸದಸ್ಯರು ಸಹಿ ಹಾಕಿದ್ದಾರೆ. ನಿಪಿ-2 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2 ಕೆ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಹುಣಸೂರು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಲಾಯಿತು. ನಿಪಿ-2 ರ ದಾಖಲೆಯನ್ನು ನನ್ನ ಕಛೇರಿಯಲ್ಲಿಯೇ ತಯಾರಿಸಿದ್ದೇನೆ.

<u>ಪಾಟೀ ಸವಾಲುಃ</u>

2 ರಿಂದ 7 ನೇ ಪ್ರತಿವಾದಿಯರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

**ಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇದೆ.,**
- ಸಹಿ -
(**ಅನಿತ**)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.